ಒ ಎಸ್ ನಂಃ **11/2015**

**ಡಿ ಡಬ್ಲ್ಯೂ** ಃ 1

ಪ್ರಮಾಣ ವಚನ ಭೋದಿಸಿದ ದಿನಾಂಕ ಃ**23.09.2024**

ಮುಂದುವರಿದ ಪಾಟೀ ಸವಾಲು **ಃ ಶ್ರೀಯುತ** ಬಿ ಎನ್ ಪಿ **ವಕೀಲರಿಂದಃ** ಪ್ರತಿವಾದಿ **2** ರಿಂದ **10** ರವರ ಪರಃ

ನನ್ನ ತಂದೆಯವರಿಗೆ ಯಾವಾಗ ಮದುವೆ ಆಯಿತು ಎಂದು ನೆನಪಿಲ್ಲ. ನನ್ನ ತಂದೆಗೆ 4 ಜನ ಮಕ್ಕಳು. ಅವರಲ್ಲಿ ನಾನು ಕೊನೆಯವನು. ವಿಶ್ವನಾಥ್ ಎನ್ನುವವರು ನನ್ನ ತಂದೆಯ ದೊಡ್ಡ ಮಗ , ಗುಲಾಬಿ , ಸುಲೋಚನ ಎನ್ನುವವರು ನನ್ನ ಸಹೋದರಿಯರು ಮತ್ತು ನಾನು ಕೊನೆಯವನು. ಅಸಲು ದಾವೆ ನಂ. 198/2015 ರಲ್ಲಿ ನನ್ನ ತಂದೆಯ ಎಲ್ಲಾ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ.

ನನಗೆ ಈಗ 49 ವರ್ಷ. ನನ್ನ ಅಣ್ಣ ವಿಶ್ವನಾಥ್ ಗೆ ಈಗ 56 ವರ್ಷವಾಗಿರಬಹುದು. ನನ್ನ ತಂದೆ ಮದುವೆಯಾಗುವ ಮುನ್ನ ಅವರ ಸಹೋದರಿಯರಾದ ಸುಂದರಿ ಮತ್ತು ಶೇಷಮ್ಮನವರ ಮದುವೆಯಾಗಿತ್ತು . 1974 ರ ಮೊದಲೇ ನನ್ನ ತಂದೆ ಮತ್ತು ಅವರ ಸಹೋದರಿಯರಿಗೆ ಮದುವೆ ಆಗಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಸುಂದರಿಯವರು ಹುಟ್ಟಿದ ದಿನಾಂಕ ನನಗೆ ಗೊತ್ತಿಲ್ಲ. ಅವರು 2010 ರಲ್ಲಿ ಮೃತರಾಗಿದ್ದಾರೆ. ಸುಂದರಿಯವರಿಗೆ 1972 ರ ಸಾಲಿನಲ್ಲಿ ಮದುವೆಯಾಗಿರುವ ಬಗ್ಗೆ ನನಗೆ ಗೊತ್ತಿಲ್ಲ.

ನನ್ನ ತಂದೆ ಐತೂರು ಗ್ರಾಮದ ಸರ್ವೆ ನಂ. 55/1ಎ , 55/3ಬಿ , 55/4 ಬಿ , 55/5 ಬಿ ಗೆ ಸಂಬಂಧಿಸಿದಿ ಸ್ವತ್ತುಗಳ ಸಂಬಂಧ ಪಾರಂ ನಂ.7 ಸಲ್ಲಿಸಿರುತ್ತಾರೆ. ನನ್ನ ದೊಡ್ಡಪ್ಪ ಐತೂರು ಗ್ರಾಮದ ಸರ್ವೆ ನಂ. 54/2 , 55/2ಪಿ2 , 55/3 ಪಿ4 , 55/5 ಪಿ2 ಗೆ ಸಂಬಂಧಿಸಿದಂತೆ ಪಾರಂ ನಂ.7 ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ಚಿಕ್ಕಪ್ಪ ಕೃಷ್ಣಪ್ಪ ಪೂಜಾರಿ ಸರ್ವೆ ನಂ. 55 ಕ್ಕೆ ಸಂಬಂಧಿಸಿದ ಇನ್ನೊಂದು ಭಾಗಕ್ಕೆ ಪಾರಂ ನಂ.7 ಸಲ್ಲಿಸಿರುತ್ತಾರೆ. ನನ್ನ ತಂದೆ , ದೊಡ್ಡಪ್ಪ ಹಾಗೂ ಚಿಕ್ಕಪ್ಪ ಒಟ್ಟಾಗಿ ಪಾರಂ ನಂ.7 ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ನನ್ನ ತಂದೆ, ದೊಡ್ಡಪ್ಪ ಹಾಗೂ ಚಿಕ್ಕಪ್ಪ ಒಂದೇ ಅರ್ಜಿಯಲ್ಲಿ ಒಂದೇ ಫಾರಂ ನಂ. ಸಲ್ಲಿಸಿರುತ್ತಾರೆ. ನನ್ನ ತಂದೆ , ದೊಡ್ಡಪ್ಪ ಹಾಗೂ ಚಿಕ್ಕಪ್ಪ ಒಂದೇ ಫಾರಂ ನಂ. 7 ನ

ಒಂದೇ ಅರ್ಜಿ ಸಲ್ಲಿಸಿಲ್ಲ ಪ್ರತ್ಯೇಕವಾಗಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಒಂದೇ ಆದೇಶ ಆಗಿರುತ್ತದೆ ಎಂದು ನುಡಿಯುತ್ತಾರೆ.

ಫಾರಂ ನಂ. 10 ರಲ್ಲಿ ನನ್ನ ತಂದೆಯ ಹೆಸರು ಮಾತ್ರ ಕಾಣುತ್ತದೆ. ಲ್ಯಾಂಡ್ ಟ್ರಿಬ್ಯುನಲ್ ಜಾಗಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ಪಡೆದಿದ್ದೇನೆ. ಲ್ಯಾಂಡ್ ಟ್ರಿಬ್ಯುನಲ್ ದಾಖಲೆಗಳಲ್ಲಿ ಐಟಂ ನಂ. 17 ರ ಬಗ್ಗೆ ಉಲ್ಲೇಖ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಲ್ಯಾಂಡ್ ಟ್ರಿಬ್ಯುನಲ್‌ಗೆ ಅರ್ಜಿ ಸಲ್ಲಿಸುವ ಕಾಲಕ್ಕೆ ಐಟಂ ನಂ. 17 ನಾರಾಯಣ ಪೂಜಾರಿಯವರಿಗೆ ಮಂಜೂರಾಗಿತ್ತು ಎಂದರೆ ಸರಿ. ನಾರಾಯಣ ಪೂಜಾರಿಯವರಿಗೆ ಆದ ಮಂಜೂರಾತಿ ಆದೇಶವನ್ನು ಪ್ರಶ್ನಿಸಿ ನನ್ನ ತಂದೆಯಾಗಲೀ ಅಥವಾ ಚಿಕ್ಕಪ್ಪನವರಾಗಲೀ ಅಥವಾ ನನ್ನ ತಂದೆಯ ಸಹೋದರಿಯರು ಯಾವುದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿಲ್ಲ. ಐಟಂ ನಂ. 17 ನ್ನು ನಾರಾಯಣ ಪೂಜಾರಿಯವರ ಹೆಸರಿಗೆ ಮಂಜೂರು ಮಾಡುವ ಕಾಲಕ್ಕೆ ನನ್ನ ತಂದೆ ನಾರಾಯಣ ಪೂಜಾರಿಯವರ ಹೆಸರಿಗೆ ಮಂಜೂರು ಮಾಡುವ ಕುರಿತು ಒಪ್ಪಿಗೆ ನೀಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾರಾಯಣ ಪೂಜಾರಿಯವರು ನನ್ನ ತಂದೆಯ ಅಣ್ಣನಾದ ಕಾರಣ ಒಪ್ಪಿಗೆ ನೀಡಿದ್ದಾರೆ ಎಂದು ನುಡಿಯುತ್ತಾರೆ.

ಐಟಂ ನಂ. 17 ಮಂಜೂರು ಮಾಡುವ ಮುನ್ನ ಸರ್ಕಾರಿ ಸ್ವತ್ತಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರಿದು ಅದು ಪಟ್ಟಾ ಜಾಗದ ಕುಮ್ಕಿ ಆಗಿತ್ತು ಎಂದು ನುಡಿಯುತ್ತಾರೆ. ಸದರಿ ಜಾಗ ನನ್ನ ಅಜ್ಜ ಬೊಳಿಯ ಪೂಜಾರಿರವರ ಪಟ್ಟಾ ಜಮೀನಿಗೆ ಸೇರಿದ ಕುಮ್ಕಿ ಜಾಗವಾಗಿತ್ತು ಎನ್ನು ಬಗ್ಗೆ ದಾಖಲೆ ಇದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆರ್ ಟಿ ಸಿ ಇದೆ ಎಂದು ನುಡಿಯುತ್ತಾರೆ. ನನ್ನ ಅಜ್ಜ ಸದರಿ ಐಟಂ ನಂ. 17 ರ ಸ್ವತ್ತನ್ನು ಸ್ವಾಧೀನ ಹೊಂದಿ ಅನುಭೋಗ ಮಾಡುತ್ತಿದ್ದ ಬಗ್ಗೆ ಸರ್ಕಾರಕ್ಕೆ ದಂಡನೆ ಕಟ್ಟಿದ ಬಗ್ಗೆ ದಾಖಲೆ ಇದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಃಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. 1960 ರ ಸಾಲಿನಲ್ಲಿ ಸದರಿ ಜಾಗದಲ್ಲಿ ಏನೆಲ್ಲಾ ಕೃಷಿ ಇತ್ತು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಪ್ರಸ್ತುತ ಐಟಂ ನಂ. 17 ರ ಆರ್ ಟಿ ಸಿ ನಾರಾಯಣ ಪೂಜಾರಿಯವರ ಮಗಳು ಸುನಂದಾ ರವರ ಹೆಸರಿನಲ್ಲಿ ಇರುತತದೆ ಎಂದರೆ ಸರಿ. ಸುನಂದರವರ ಹೆಸರಿಗೆ ಆರ್ ಟಿ ಸಿ ನಮೂದಾಗುವ ಮೊದಲು ನಾರಾಯಣ ಪೂಜಾರಿಯವರ ಹೆಸರಿನಲ್ಲಿ ಐಟಂ ನಂ. 17 ರ ಆರ್ ಟಿ ಸಿ ಇತ್ತು ಎಂದರೆ ಸರಿ. ಸುನಂದರವರ ಹೆಸರಿಗೆ ಆರ್ ಟಿ ಸಿ ಐಟಂ ನಂ. 17 ರ ಸಂಬಂಧ ಬದಲಾವಣೆಯಾಗಿರುವುದನ್ನು ಪ್ರಶ್ನಿಸಿ ರೆವಿನ್ಯು ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿಲ್ಲ.

ಮಂಜೂರಾತಿ ಕಾಲಕ್ಕೆ ಐಟಂ ನಂ. 17 ರ ಸ್ವತ್ತಿನಲ್ಲಿ ಅಡಿಕೆ ಸಸಿ, ತಾಳೆ , ಹಲಸು ಕೃಷಿ ಯನ್ನು ನಾರಾಯಣ ಪೂಜಾರಿಯವರು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಂಜೂರಾತಿಯಾದ ನಂತರ ಪ್ರಸ್ತುತ ರಬ್ಬರ್ ಕೃಷಿ ಐಟಂ ನಂ. 17 ರ ಸ್ವತ್ತಿನಲ್ಲಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾವು ಮಾಡಿರುತ್ತೇವೆ ಎಂದು ನುಡಿಯತ್ತಾರೆ. ನಾವು 2011 ರಲ್ಲಿ ರಬ್ಬರ್ ಕೃಷಿಯನ್ನು ಐಟಂ ನಂ. 17 ರ ಸ್ವತ್ತಿನಲ್ಲಿ ಮಾಡಿದ್ದೇವೆ. ಅದಕ್ಕು ಮೊದಲು ಗೇರುಕೃಷಿಯನ್ನು ನಾವು ಮಾಡಿದ್ದೆವು ಎಂದು ನುಡಿಯುತ್ತಾರೆ. ಯಾವಾಗ ಗೇರುಕೃಷಿಯನ್ನು ಮಾಡಿದ್ದೆವು ಎಂದು ಹೇಳಲಾಗುವುದಿಲ್ಲ. ಸುಮಾರು 800 ರಬ್ಬರ್ ಮರಗಳನ್ನು ಬೆಳಸಿದ್ದೇವೆ. ರಬ್ಬರ್ ಸಸಿಗಳನ್ನು ಖರೀದಿ ಮಾಡಿದ ಬಗ್ಗೆ ಮತ್ತು ರಬ್ಬರ್ ಮರಗಳ ಸಂಬಂಧ ಬ್ಯಾಂಕ್ನಲ್ಲಿ ಸಾಲ ಪಡೆದ ಬಗ್ಗೆ ದಾಖಲೆ ಇರುತ್ತದೆ. ಯಾವ ಬ್ಯಾಂಕಿನಲ್ಲಿ ಸಾಲ ಪಡೆದಿದ್ದೀರಿ ಎನ್ನುವಬ ಪ್ರಶ್ನೆಗೆ ಸಾಕ್ಷಿಯು ಸಿ ಎ ಮರ್ದಾಳ ಬ್ಯಾಂಕಿನಲ್ಲಿ ನಮ್ಮ ಪಟ್ಟಾ ಜಾಗದ ಸಂಬಂಧ ಸಾಲ ಪಡೆದಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ಪಟ್ಟಾ ಜಾಗದಲ್ಲಿ ಕೃಷಿ ಮಾಡುತ್ತೇವೆ ಎಂದು ಸಾಲ ಪಡೆದಿದ್ದೇವೆ , ರಬ್ಬರ್ ಕೃಷಿಯನ್ನೇ ಮಾಡುತ್ತೇವೆಂದು ಸಾಲ ಪಡೆದಿಲ್ಲ. ಬ್ಯಾಂಕಿನ

ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಐಟಂ ನಂ. 17 ರಲ್ಲಿ ರಬ್ಬರ್ ಕೃಷಿ ಮಾಡಿದ್ದಾರೆ ಎಂದು ವರದಿಯನ್ನು ಸಲ್ಲಿಸಿದ್ದಾರಾ ಎಂದರೆ ಇಲ್ಲ, ಸಾಕ್ಷಿ ಮುಂದುವರೆದು ಬ್ಯಾಂಕಿನವರು ಪರಿಶೀಲನೆಗೆ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ರಬ್ಬರ್ ಬೋರ್ಡ ನಿಂದ ಸಬ್ಸಿಡಿಯನ್ನು ಪಡೆದಿದ್ದೇವೆ. ರಬ್ಬರ್ ಬೋರ್ಡ ನಿಂದ ಸಬ್ಸಿಡಿಯನ್ನು ಪಡೆಯುವಾಗ ಪಟ್ಟಾ ಜಾಗದ ಮತ್ತು ನಮ್ಮ ಇತರೆ ಜಾಗದ ದಾಖಲೆಗಳನ್ನು ಕೊಟ್ಟಿದ್ದೇವೆ. ರಬ್ಬರ್ ಬೋರ್ಡ ನಿಂದ ಸಬ್ಸಿಡಿ ಪಡೆಯುವಾಗ ಸರ್ವೆ ನಂ. 54/1 b ಗೆ ಸಂಬಂಧಿಸಿದ ದಾಖಲೆಯನ್ನು ಕೊಟ್ಟಿಲ್ಲ. ಐಟಂ ನಂ. 17 ರಲ್ಲಿ ನಾವು ಯಾವತ್ತೂ ರಬ್ಬರ್ ಕೃಷಿ ಮಾಡಿಲ್ಲ ಮತ್ತು ನಾವು ಸ್ವಾಧೀನದಲ್ಲಿ ಇಲ್ಲ ಬದಲಾಗಿ ಸುನಂದರವರು ಈ ಮೋದಲು ಸ್ವಾದಧೀನದಲ್ಲಿದ್ದು ಪ್ರಸ್ತುತ 3 ನೇ ಪ್ರತಿವಾದಿ ಸದರಿ ಜಾಗದ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ॰ ಮುಂದುವರೆದು ನಾವೇ ಸ್ವಾಧೀನದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ದಾವಾ ಐಟಂ ನಂ. 1 ರಿಂದ 16 ಸ್ವತ್ತುಗಳು ಬೊಳಿಯ ಪೂಜಾರಿಯವರ ಮೂಲ ಗೇಣಿ ಸ್ವತ್ತುಗಳಲ್ಲ ಎಂದರೆ ಸರಿಯಲ್ಲ.

ಸದರಿ ಸ್ವತ್ತುಗಳು ನನ್ನ ತಂದೆ, ನಾರಾಯಣ ಪೂಜಾರಿ ಹಾಗೂ ಕೃಷ್ಣಪ್ಪ ಪೂಜಾರಿರವರು ಚಾಲಗೇಣಿಗೆ ಪಡೆದುಕೊಂಡ ಆಸ್ತಿಗಳು ಎಂದರೆ ಸುಳ್ಳು. ನಾನು ಹೇಳಿರುವಂತೆ ನನ್ನ ತಂದೆ, ನಾರಾಯಣ ಪೂಜಾರಿ ಹಾಗೂ ಕೃಷ್ಣಪ್ಪ ಪೂಜಾರಿರವರು ಬಾಯಿಮಾತಿನ ಪಾಲುಮಾಡಿಕೊಂಡು ನಂತರ ಅವುಗಳ ಮಂಜೂರಾತಿಗಾಗಿ ಫಾರಂ. ನಂ.7 ನ್ನು ಸರ್ಕಾರಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ವಾದಿಯ ಜೊತೆ ಶರೀಕಾಗಿ ಪ್ರತಿವಾದಿ 2 ರಿಂದ 10 ರವರಿಗೆ ಮೋಸ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ**

**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು**
**ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು**